# ಸಂವಿಧಾನದ ತತ್ವ

ಭಾರತದ ಚಾತುರ್ವರ್ಣ್ಯ ವ್ಯವಸ್ಥೆಯು ಶೋಷಿತರು ಹಾಗೂ ಮಹಿಳೆಯರಿಗೆ ಎಂದೂ ನೀಡದಿದ್ದ ಸಮಾನತೆ, ಶಿಕ್ಷಣ, ಉದ್ಯೋಗ, ಶೋಷಣೆಯ ವಿರುದ್ಧದ ಹಕ್ಕು, ಧಾರ್ಮಿಕ ಹಾಗೂ ಸಾಮಾಜಿಕ ನ್ಯಾಯದ ಹಕ್ಕುಗಳನ್ನು ಭಾರತದ ಸಂವಿಧಾನ ನಮಗೆಲ್ಲ ನೀಡಿದೆ. ನಮ್ಮ ಸಂವಿಧಾನವೆಂದರೆ ಅದು ಧರ್ಮನಿರಪೇಕ್ಷ ಹಾಗೂ ಜಾತ್ಯತೀತ ತಳಪಾಯದ ಮೇಲೆ ಮಾನವ ಹಕ್ಕುಗಳ ಘನತೆಯನ್ನು ಎತ್ತಿಹಿಡಿಯುವುದಾಗಿದೆ. ಎಲ್ಲ ಧರ್ಮಗ್ರಂಥಗಳಿಗಿಂತ ಮಿಗಿಲಾದ ಮಾನವೀಯತೆಯ ಪರವಾಗಿರುವ ಸಂವಿಧಾನ ನಮ್ಮದು. ಭಾರತದಲ್ಲಿರುವ ಧರ್ಮಗ್ರಂಥಗಳು ಎಲ್ಲ ಕಾಲಕ್ಕೂ, ಎಲ್ಲ ಸಮುದಾಯದವರಿಗೂ ಪ್ರಸ್ತುತ ಎಂದು ಹೇಳಲಾಗದು! ಆದರೆ ಸಂವಿಧಾನ ಹೇಳುವ ತತ್ವಗಳು ಎಲ್ಲ ಕಾಲಕ್ಕೂ, ಎಲ್ಲ ಸಮುದಾಯದವರಿಗೂ ಪ್ರಸ್ತುತವಾಗಿವೆ. ಆದ್ದರಿಂದಲೇ ಭಾರತ ಸಂವಿಧಾನ ಎನ್ನುವುದು ಎಲ್ಲ ಸಮುದಾಯಗಳ ಬಿಡುಗಡೆಯ ಬೆಳಕು.

ಈ ಬಿಡುಗಡೆ ಎನ್ನುವುದು ಕೇವಲ ಹಿಂದೂಗಳಿಗೆ, ಮುಸ್ಲಿಂರಿಗೆ ಮಾತ್ರವಲ್ಲ! ಎಲ್ಲ ಭಾರತೀಯರನ್ನೂ ಒಳಗೊಂಡಿದೆ. ಸಂವಿಧಾನದ ತತ್ವಗಳು ಮೇಲು ಸಮಾಜದವರಿಂದ ಮೊದಲುಗೊಂಡು ಅವಕಾಶವಿಹೀನ ದುರ್ಬಲ ಸಮುದಾಯಗಳಿಗೆ, ಎಲ್ಲ ಬುಡಕಟ್ಟು, ಆದಿವಾಸಿ ಹಾಗೂ ಅಲೆಮಾರಿಗಳಿಗೆ, ಅಕ್ಷರಸ್ಥರಿಂದ ಮೊದಲುಗೊಂಡು ಅನಕ್ಷರಸ್ಥರಿಗೂ ಸಮಾನ ಹಕ್ಕುಗಳನ್ನು ನೀಡಿದೆ. ವಿಶೇಷವಾಗಿ 'ಸ್ವಾತಂತ್ರ್ಯ ಮಹಿಳೆಯರಿಗಲ್ಲ!' ಎಂದು ಧರ್ಮಶಾಸ್ತ್ರಗಳಿಂದ ತಿರಸ್ಕರಿಸಲ್ಪಟ್ಟಿದ್ದ ಎಲ್ಲ ಹಿನ್ನೆಲೆಯ ಮಹಿಳೆಯರಿಗೆ ನಾಗರಿಕ ಹಕ್ಕುಗಳನ್ನೂ ಕೊಟ್ಟದ್ದು ಭಾರತ ಸಂವಿಧಾನ ಎಂಬುದನ್ನು ಮರೆಯಬಾರದು.

ಅದೊಂದು ಆದಿವಾಸಿಗಳು ವಾಸಿಸುತ್ತಿದ್ದ ಅರಣ್ಯದಂಚಿನ ಒಂದು ಪುಟ್ಟ ಪ್ರದೇಶ. ಅಲ್ಲಿ ವಿರಳ ಸಂಖ್ಯೆಯಲ್ಲಿದ್ದ ಒಂದು ಬುಡಕಟ್ಟು ಸಮುದಾಯದವರು ತೀರಾ ನಿಕೃಷ್ಟ ಸ್ಥಿತಿಯಲ್ಲಿದ್ದ ಜೋಪಡಿಗಳಲ್ಲಿ ವಾಸಿಸುತ್ತಿದ್ದರು. ಆ ಗುಡಿಸಲುಗಳೇ ಅವರ ಬದುಕಿನ ದಾರುಣತೆಯನ್ನು ಹೇಳುವಂತಿದ್ದವು. ಅಲ್ಲಿದ್ದ ಮಕ್ಕಳಲ್ಲಿ ಕೆಲವರು ಅಲ್ಲಿಂದ ಎಂಟು ಕಿಮೀ ದೂರ ಹೋಗಿ ಹೈಸ್ಕೂಲು ದಾಟಿದವರು, ಕೆಲವರು ಪಿಯುಸಿಯನ್ನು ಅರ್ಧಕ್ಕೇ ಬಿಟ್ಟವರಿದ್ದರು. ಭೂಮಿಯ ಮೇಲಿನ ಅತ್ಯಂತ ನಿರ್ಗತಿಕ ಸಮುದಾಯ ಅದು. ಅವರಿಗಾಗಿ ಧ್ವನಿ ಎತ್ತುವವರು ಯಾರೂ ಅವರ ನಡುವೆ ಇರಲಿಲ್ಲ! ಕೂಲಿ ಮಾಡಿಕೊಂಡು ಬದುಕು ಸವೆಸುತ್ತಿದ್ದ ಅವರಿಗೆ ತಲೆಯ ಮೇಲೊಂದು ಸೂರು, ಶಿಕ್ಷಣ ಮತ್ತು ಆರೋಗ್ಯ ಎನ್ನುವುದು ಗಗನ ಕುಸುಮವಾಗಿತ್ತು! ಕಾಡುಪ್ರಾಣಿಗಳ ಭಯಕ್ಕಿಂತ ಹೆಚ್ಚಾಗಿ ಮೇಲುವರ್ಗದವರ ದಬ್ಬಾಳಿಕೆ, ಅಧಿಕಾರಿಶಾಹಿಯ ಕಿರುಕುಳದ ನಡುವೆಯೇ ಅವರು ಜೀವಿಸುತ್ತಿದ್ದರು. ಒಂದು ದಿನ ಕೆಲವು ಅಧಿಕಾರಿಗಳು ಅವರು ವಾಸಿಸುತ್ತಿದ್ದ ಗುಡಿಸಲುಗಳಿಗೆ ಬಂದು 'ಈ ಸ್ಥಳ ನಮ್ಮ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಈಗಿನಿಂದೀಗಲೇ ನೀವು ಈ ಸ್ಥಳವನ್ನು ಖಾಲಿ ಮಾಡಬೇಕು' ಎಂದು ದರ್ಪದಿಂದ ಗರ್ಜಿಸಿದರು. ಆದಿವಾಸಿಗಳು 'ನಾವು ಅನೇಕ ವರ್ಷಗಳಿಂದ ಇಲ್ಲಿಯೇ ವಾಸಿಸುತ್ತಿದ್ದೇವೆ, ಇಲ್ಲಿಂದ ನಮ್ಮನ್ನು ಆಚೆ ಹಾಕಬೇಡಿ' ಎಂದು ಪರಿಪರಿಯಾಗಿ ಬೇಡಿಕೊಂಡರೂ ಅಧಿಕಾರಿಶಾಹಿ ಮಣಿಯಲಿಲ್ಲ! ಅಷ್ಟರಲ್ಲಿ ಅಲ್ಲಿದ್ದ ಹುಡುಗರ ಪೈಕಿ ಒಬ್ಬ ಯಾವುದೋ ಗುಡಿಸಲಿನೊಳಗೆ ಹೋಗಿ ಹರುಕುಮುರುಕಾದ ಗಾಂಧೀಜಿಯ ಚಿತ್ರವೊಂದನ್ನು ತಂದು ಅಲ್ಲಿದ್ದ ಜಗುಲಿಯ ಮೇಲೆ ಇಟ್ಟು ಅಧಿಕಾರಿಗಳ ಮುಂದೆ ಸತ್ಯಾಗ್ರಹಿಯಂತೆ ಕುಳಿತುಕೊಂಡ! ಅವನನ್ನು ನೋಡಿ ಇತರ ಹುಡುಗರು, ಕೆಲವು ಹಿರಿಯರು ಹಾಗೂ ವಯಸ್ಸಾದ ಮಹಿಳೆಯರೂ ಅವನೊಂದಿಗೆ ಕೈ ಜೋಡಿಸಿದರು. ಆದರೂ ಅಧಿಕಾರಿಗಳು ದರ್ಪದ ಮಾತುಗಳನ್ನಾಡುತ್ತಾ ತಮ್ಮ ನೌಕರರಿಗೆ ಅವರ ಗುಡಿಸಲುಗಳನ್ನು ಕಿತ್ತುಹಾಕಲು ಹೇಳುತ್ತಿದ್ದರು. ಅಷ್ಟರಲ್ಲಿ ಮತ್ತೊಬ್ಬ ಹುಡುಗ ಎಲ್ಲಿಗೋ ಹೋಗಿ ಒಂದು ರಟ್ಟಿಗೆ ಅಂಟಿಸಿದ್ದ ಅಂಬೇಡ್ಕರ್ ಫೋಟೊವನ್ನು ತಂದು ಗಾಂಧಿ ಚಿತ್ರದ ಪಕ್ಕದಲ್ಲಿಟ್ಟು 'ಗಾಂಧಿ ಮಹಾತ್ಮಗೆ ಜೈ', 'ಬಾಬಾ ಸಾಹೇಬ್ ಅಂಬೇಡ್ಕರ್ ಮಹಾತ್ಮಗೆ ಜೈ', 'ಈ ಭೂಮಿ ನಮ್ಮದು, ನಾವು ಎಲ್ಲಿಗೂ ಹೋಗಲಾರೆವು' ಎಂದು ಕೂಗಿ ಕುಳಿತುಕೊಂಡ. ಕ್ರಮೇಣ ಸುತ್ತಮುತ್ತ ಇದ್ದ ಹಾಡಿಯ ಜನರು ಸೇರಿಕೊಂಡಿದ್ದರಿಂದ ಅವರ ಧ್ವನಿ ದೊಡ್ಡದಾಯಿತು. ಅಧಿಕಾರಿಗಳ ಗುಂಪು ಅವರನ್ನು ಮುಟ್ಟಲಾರದೆ ನಿರಾಯುಧವಾಯಿತು! ಅವರೆಲ್ಲ ತಮ್ಮಲ್ಲೇ ಏನನ್ನೋ ಮಾತನಾಡಿಕೊಂಡು ಕೊನೆಗೆ ಬಂದ ದಾರಿಗೆ ಸುಂಕವಿಲ್ಲದಂತೆ ಮರಳಿದರು.

ಇದೊಂದು ಕತೆಯಲ್ಲ! ವಾಸ್ತವವಾಗಿ ನಡೆದ ಒಂದು ಘಟನೆ. ಹೀಗೆ ಅಂಬೇಡ್ಕರ್ ಅವರು ತಮಗೆ ನೀಡಿದ್ದ ಸಂವಿಧಾನಬದ್ಧವಾದ ಹಕ್ಕನ್ನು ಆದಿವಾಸಿಗಳು ಅಧಿಕಾರಿಶಾಹಿ ಮೇಲೆ ಅಹಿಂಸಾತ್ಮಕವಾಗಿ ಪ್ರಯೋಗಿಸಿದರು. ಇದರಿಂದಾಗಿ ತಾತ್ಕಾಲಿಕವಾಗಿಯಾದರೂ ಅವರಿಗೆ ಜಯ ದೊರಕಿತು. ನಮ್ಮ ಸಾಮಾಜಿಕ ಹೋರಾಟಗಾರರಿಗೆ ಇದೊಂದು ಸಾಂಸ್ಕೃತಿಕವಾಗಿ ಬೆಸೆಯುವ ರೂಪಕವಾಗಿಯೂ ಕಾಡಬೇಕು! ನಾಳಿನ ಭಾರತದ ಅರಿವಿದ್ದ ಅಂಬೇಡ್ಕರ್ ರೂಪಿಸಿಕೊಟ್ಟ ಸಂವಿಧಾನದಲ್ಲಿ ಗಾಂಧಿಯ ಅಹಿಂಸೆ ಮತ್ತು ಸತ್ಯಾಗ್ರಹದ ಬೀಜಗಳೂ ಇವೆ. ಸಂವಿಧಾನದ ವೃಕ್ಷ ಇಂದು ಹೆಮ್ಮರವಾಗಿ ಭಾರತೀಯರಿಗೆ ಫಲ ನೀಡುತ್ತಿದೆ. ಫಲ ಕೊಡುವ ಈ ವೃಕ್ಷವನ್ನು ಕಾಪಾಡಿಕೊಳ್ಳಬೇಕಾದ್ದು ನಮ್ಮೆಲ್ಲರ ಸಾಮೂಹಿಕ ಹೊಣೆ. 'ಯಾವನು ಅಪ್ಪಟ ಅಹಿಂಸಾ ಮಾರ್ಗದಿಂದ ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುತ್ತಾನೋ, ಯಾರು ತನ್ನ ದೇಶ ಹಾಗೂ ಅಖಂಡ ಮಾನವಕುಲದ ಸ್ವಾತಂತ್ರ್ಯವನ್ನು ರಕ್ಷಿಸುತ್ತಾನೋ ಅವನು ನಿಜವಾದ ಪ್ರಜಾಪ್ರಭುತ್ವವಾದಿ' ಎಂಬ ಗಾಂಧೀಜಿಯ ಮಾತು ಮನನೀಯವಾದುದು. ಈ ರೂಪಕದ ಹಿನ್ನೆಲೆಯಲ್ಲಿ ನೋಡಿದರೆ ಗಾಂಧಿ ಮತ್ತು ಅಂಬೇಡ್ಕರ್ ಹೊಸ ಭಾರತಕ್ಕೆ ನಡೆಯುವ ಹಾದಿಯನ್ನು ತೋರಿದವರು. ಆದ್ದರಿಂದ ಭಾರತದ ನಿಜವಾದ ಸಾರ್ವಕಾಲಿಕ ಅಸ್ಮಿತೆಗಳೆಂದರೆ ಗಾಂಧಿ ಮತ್ತು ಅಂಬೇಡ್ಕರ್.

'ಯಾವ ರಾಷ್ಟ್ರ ಸಮಾನತೆ, ಸ್ವಾತಂತ್ರ್ಯ ಹಾಗೂ ಸೋದರತ್ವಗಳನ್ನು ಒಪ್ಪಿಕೊಂಡಿರುತ್ತದೋ ಅದು ಪ್ರಜಾಪ್ರಭುತ್ವದ ಭಾಷೆಯಲ್ಲಿ ಮಾತನಾಡುತ್ತದೆ' ಯಾವ ಧರ್ಮಗ್ರಂಥವೂ ಭಾರತೀಯರೆಲ್ಲ ಒಂದೇ ಎನ್ನುವುದನ್ನು ನಮಗೆ ಹೇಳಿಕೊಟ್ಟಿರಲಿಲ್ಲ! ಆದರೆ ಭಾರತ ಸಂವಿಧಾನದ ಆರಂಭದ ಸಾಲು 'ಭಾರತದ ಜನತೆಯಾದ ನಾವು' ಎನ್ನುವುದನ್ನು ನಮಗೆ ಮೊದಲ ಪಾಠವಾಗಿ ಕಲಿಸಿದೆ, ಜೊತೆಗೆ ವ್ಯಕ್ತಿಗೌರವ, ಸಹೋದರತೆ ಹಾಗೂ ದೇಶದ ವೈವಿಧ್ಯವನ್ನು ಎತ್ತಿಹಿಡಿಯುತ್ತದೆ. ಭಾರತದಲ್ಲಿ ಯಾವುದೇ ಬಲಿಷ್ಠ ವ್ಯಕ್ತಿಯಾಗಲಿ ಆತ ಎಲ್ಲರನ್ನೂ ಒಳಗೊಳ್ಳುವ ಭಾಷೆಯಲ್ಲಿಯೇ ಮಾತನಾಡಬೇಕೆಂಬ ಅನಿವಾರ್ಯತೆಯನ್ನು ಸೃಷ್ಟಿಸಿದ್ದು ಭಾರತ ಸಂವಿಧಾನ.

ಭಾರತೀಯರಿಗೆ ಸ್ವಾತಂತ್ರ್ಯ ಒಂದು ರೆಕ್ಕೆಯಾದರೆ, ಸಂವಿಧಾನ ಇನ್ನೊಂದು ರೆಕ್ಕೆ!

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಮನುಷ್ಯನಿಗೆ ಯಾವುದು ಗೊತ್ತಿಲ್ಲವೋ ಅದನ್ನು ತಿಳಿಸುವುದು ವಿದ್ಯಾಭ್ಯಾಸದ ಗುರಿಯಲ್ಲ. ಹೇಗೆ ವರ್ತಿಸಬೇಕೆಂದು ತಿಳಿಸುವುದೇ ವಿದ್ಯಾಭ್ಯಾಸದ ಗುರಿ.
  —ಜಾನ್ ರಸ್ಕಿನ್
- ಕೋಪ–ತಾಪ, ದ್ವೇಷ ಎಂದರೆ ಬೇರೆಯವರಿಗೆ ಎರಚಬೇಕೆಂದು ನಿಮ್ಮ ಸೆರಗಿನಲ್ಲಿ ಕೆಂಡ ಕಟ್ಟಿಕೊಂಡಂತೆ. ಅದು ನಿಮ್ಮನ್ನು ಭಸ್ಮ ಮಾಡುತ್ತದೆಯೇ ಹೊರತು ಬೇರೆಯವರನ್ನಲ್ಲ.
  —ಗೌತಮಬುದ್ಧ
- ಜನರಿಗೆ ತಮ್ಮ ಹಕ್ಕು ಹೊಣೆಗಾರಿಕೆಯ ಅರಿವು ಇಲ್ಲದೆ ಹೋದರೆ ಪ್ರಜಾಪ್ರಭುತ್ವ ಕೇವಲ ನಕಲಿ ಮಾಲು.
  —ಗೋಪಾಲಕೃಷ್ಣ ಅಡಿಗ
- ಮಕ್ಕಳು, ನಾವು ಹೇಳುವುದನ್ನು ಕಲಿಯುವುದಿಲ್ಲ, ನಾವು ಮಾಡುವುದನ್ನು ನೋಡಿ ಕಲಿಯುತ್ತಾರೆ.
  —ಖಲೀಲ್ ಗಿಬ್ರಾನ್
- ಇನ್ನೊಬ್ಬರಿಗೆ ಅನ್ಯಾಯವಾಗದ ರೀತಿಯಲ್ಲಿ ಬದುಕುವುದು ಪರರಿಗೆ ಸುಖ ಕೊಡಲು ಬಾರದೇ ಹೋದರೂ ದುಃಖ ಕೊಡದು.
  —ಶಿವರಾಮ ಕಾರಂತ